India Media Monitor

# Ee Sanje

## Save Doctors

**Date: 30/07/2013 | Edition: Bangalore | Page: 2 | Source: Bureau | Clip size (cm): W: 14 H: 14**

**Clip: 1 of 1**

# ಸೇವ್ ಡಾಕ್ಟರ್ಸ್ ಅಭಿಯಾನ




**ಬೆಂಗಳೂರು, ಜು.29**-ಪದವಿ ಮತ್ತು ಸ್ನಾತಕೋತ್ತರ ಪದವಿ ಸೀಟು'ಳಲ್ಲಿ ಸಮತೋಲನ ಕಾಯ್ದುಕೊಳ್ಳುವ ಉದ್ದೇಶದಿಂದ ವೈದ್ಯರನ್ನು ರಕ್ಷಿಸಿ (ಸೇವ್ ಡಾಕ್ಟರ್ಸ್) ಎಂಬ ರಾಷ್ಟ್ರವ್ಯಾಪಿ ಅಭಿಯಾನ ಆರಂಭಿಸಲಾಗಿದೆ.

ಆರೋಗ್ಯ ಸೇವೆ ಪೂರೈಕೆದಾರರ ಸಂಘದ ಅಪೇಕ್ಷೆಯಾದ ಗ್ರಾಮೀಣ ಭಾಗದಲ್ಲಿ ಇಂಟರ್ನ್‌ಶಿಪ್, ನಿಯೋಜನೆ, ಪದವಿ ತರಬೇತಿಯ ಒಂದು ಭಾಗವಾಗಬೇಕು ಎಂಬುದನ್ನು ಮೂರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭಿಯಾನ ಮಾಡಿಸುವ ಮೂಲಕ ಬೆಂಬಲಿಸಿದ್ದಾರೆ.

ಗೈನಾಕಾಲಜಿ, ನ್ಯೂರೋಲಾಜಿ, ರೇಡಿಯಾಲಜಿ ಸೇರಿದಂತೆ ಒಬ್ಬ ವೈದ್ಯ ಯಾವುದಾದರೊಂದು ಕ್ಷೇತ್ರದಲ್ಲಿ ವಿಶೇಷತೆ ಪಡೆದು ಸ್ನಾತಕೋತ್ತರ ಪದವಿ ಸಂಪಾದಿಸಬೇಕು.

ಆದರೆ ಗ್ರಾಮೀಣ ನಿಯುಕ್ತಿ ಹಾಗೂ ಪಿಜಿ ಮತ್ತು ಯುಜಿ ವಿದ್ಯಾರ್ಥಿಗಳಿಗೆ ನೀಡಿರುವ ಸೀಟುಗಳ ಅಸಮತೋಲನದಿಂದ ಯುವ ವೈದ್ಯರಿಗೆ ಸಂಕಷ್ಟ ಎದುರಾಗಿದೆ.

ಇಂತಹ ಪರಿಸ್ಥಿತಿಯನ್ನು ನಿವಾರಿಸಿ ಸಮತೋಲನ ಕಾಪಾಡಲು ಮನವಿ ಮಾಡಿ ದೇಶದ ನೀತಿ ನಿರೂಪಕರು ಹಾಗೂ ವೈದ್ಯಕೀಯ ಸಂಸ್ಥೆಗಳ ಗಮನ ಸೆಳೆಯಲು ಈ ಅಭಿಯಾನ ಆರಂಭಿಸಲಾಗಿದೆ.